ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು
ADIKAVI SRI MAHARSHI VALMIKI UNIVERSITY, RAICHUR
Krishna Tunga Campus, Mantralay Road (N.H. 167), Yergera -584133, Raichur, Karnataka
ಶೈಕ್ಷಣಿಕ ವಿಭಾಗ Website: https://raichuruniversity.ac.in

ಸಂ.ಆಶ್ರೀಮವಾವಿರಾ/ಶೈವಿ/ಬಿ.ಇಡಿ/2024-25/ 1724 ದಿನಾಂಕ: 25/03/2025

## ಸುತ್ತೋಲೆ

ವಿಷಯ: 2024-25ನೇ ಸಾಲಿನಲ್ಲಿ ಸರ್ಕಾರದ ಕೋಟಾದಡಿ ಹಂಚಿಕೆಯಾಗಿ ಖಾಲಿ ಉಳಿದ/ ಉಳಿಯುವ ಬಿ.ಇಡಿ. ಸೀಟುಗಳನ್ನು ಆಡಳಿತ ಮಂಡಳಿಯ ಕೋಟಾದಡಿ ಭರ್ತಿ ಮಾಡಿಕೊಳ್ಳುವ ಕುರಿತು.

ಉಲ್ಲೇಖ: 1. ಸರ್ಕಾರಿ ಆದೇಶ ಸಂಖ್ಯೆ:ಇಡಿ 19 ಯುಜಿಹೆಚ್ 2025(ಇ) ದಿನಾಂಕ: 17.03.2025
2. ಸಂ.ರಾವಿರಾ/ಶೈಕ್ಷಣಿಕ ವಿಭಾಗ/2023-24/1676 ದಿನಾಂಕ:13.03.2024
3. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:25-03-2025

*****

ಮೇಲ್ಕಾಣಿಸಿದ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯಕ್ಕೆ ಸಂಯೋಜನೆ ಹೊಂದಿರುವ ಮತ್ತು NCTE ಮಾನ್ಯತೆ ಪಡೆದ ಶಿಕ್ಷಣ ಮಹಾವಿದ್ಯಾಲಯಗಳಲ್ಲಿ 2024-25ನೇ ಸಾಲಿಗೆ ಹಂಚಿಕೆಯಾಗದೇ ಸರ್ಕಾರದ ಕೋಟಾದಡಿ (1) ಖಾಲಿ ಇರುವ ಹಾಗೂ (2) ಹಂಚಿಕೆಯಾದ ಸೀಟುಗಳ ಪೈಕಿ ವಿದ್ಯಾರ್ಥಿಗಳು ದಾಖಲಾಗದೇ ಮರುಹಂಚಿಕೆ ಅಥವಾ ಮರುಕೌನ್ಸಿಲಿಂಗ್ ನಂತರವೂ ಖಾಲಿ ಉಳಿದಿರುವ ಬಿ.ಇಡಿ ಸೀಟುಗಳನ್ನು ಆಯಾ ಕಾಲೇಜು ಆಡಳಿತ ಮಂಡಳಿಯವರು ದಿನಾಂಕ: **28.03.2025** ರವರೆಗೆ ಕರ್ನಾಟಕ ಸರ್ಕಾರದ Merit Cum Reservation Policy ಆಧಾರದ ಮೇಲೆ ಭರ್ತಿ ಮಾಡಿಕೊಂಡು ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯದ ನಿಯಮಾವಳಿಗಳ ಪ್ರಕಾರ ಪ್ರವೇಶಾತಿ ಪ್ರಕ್ರಿಯೆಯನ್ನು ಕೈಗೊಳ್ಳಲು ಹಾಗೂ ವಿಶ್ವವಿದ್ಯಾಲಯಕ್ಕೆ ವರದಿ ಸಲ್ಲಿಸಲು ಈ ಕೆಳಕಂಡ ಷರತ್ತು/ ನಿಭಂಧನೆಗೆ ಒಳಪಟ್ಟು ಅನುಮತಿ ನೀಡಲಾಗಿದೆ.

**ಷರತ್ತು/ ನಿಬಂಧನೆಗಳು:**

1. ಸರ್ಕಾರಿ ಕೋಟಾದಡಿ ಖಾಲಿ ಉಳಿದಿರುವ ಸೀಟುಗಳನ್ನು ಭರ್ತಿ ಮಾಡುವ ಪ್ರಕ್ರಿಯೆ ಮೇಲೆ ವಿಶ್ವವಿದ್ಯಾಲಯಗಳು ನಿಗಾ ಇಡತಕ್ಕದ್ದು, ಭರ್ತಿ ಪ್ರಕ್ರಿಯೆಯಲ್ಲಿ ಲೋಪ/ ವ್ಯತಿಕ್ರಮ ಕಂಡುಬಂದಲ್ಲಿ ಸಂಬಂಧಿಸಿದ ಕಾಲೇಜುಗಳ ವಿರುದ್ಧ ವಿಶ್ವವಿದ್ಯಾಲಯಗಳು ಕಠಿಣ ಕ್ರಮ ಜರುಗಿಸತಕ್ಕದ್ದು.
2. ಸರ್ಕಾರಿ ಕೋಟಾದಡಿಯ ಖಾಲಿ ಸೀಟುಗಳ ಪ್ರವೇಶ ದಾಖಲಾತಿ ಪ್ರಕ್ರಿಯೆಯನ್ನು ಸಂದರ್ಭಾನುಸಾರ ವಿಶ್ವವಿದ್ಯಾಲಯಗಳು ನಿಗದಿಪಡಿಸಿದ ಅಂತಿಮ ಕಾಲಾವಧಿ ಮತ್ತು ಅವಶ್ಯಕತೆಗಳಿಗನುಗುಣವಾಗಿ ವಿಸ್ತರಿಸಲಾಗುವ ಕಾಲಮಿತಿಯೊಳಗಾಗಿ ಮತ್ತು ಅವಶ್ಯಕತೆಗಳಿಗನುಗುಣವಾಗಿ ವಿಸ್ತರಿಸಲಾಗುವ ಕಾಲಮಿತಿಯೊಳಗಾಗಿ ಪೂರ್ಣಗೊಳಿಸತಕ್ಕದ್ದು ಹಾಗೂ ಸದರಿ ಸಂಪೂರ್ಣ ವಿವರಗಳನ್ನು ಪ್ರವೇಶ ದಾಖಲಾತಿ ಪ್ರಕ್ರಿಯೆ ಮುಕ್ತಾಯಗೊಂಡ 10 ದಿನಗೊಳಗಾಗಿ ಸಂಬಂಧಿಸಿದ ವಿಶ್ವವಿದ್ಯಾಲಯಗಳಿಗೆ ವರದಿ ಮಾಡತಕ್ಕದ್ದು, ತಪ್ಪಿದ್ದಲ್ಲಿ ವಿದ್ಯಾರ್ಥಿಗಳ ಪ್ರವೇಶ ದಾಖಲಾತಿಗೆ ಮಾನ್ಯ ಮಾಡತಕ್ಕದಲ್ಲ.
3. ಸರ್ಕಾರವು ವಿಧಿಸಿರುವ ಆಡಳಿತ ಶುಲ್ಕವನ್ನು ಹಾಗೂ ವಿಶ್ವವಿದ್ಯಾಲಯವು ನಿಗದಿಪಡಿಸಿರುವ ಇತರೆ ಶುಲ್ಕಗಳನ್ನು ಮಾತ್ರ ತೆಗೆದುಕೊಳ್ಳತಕ್ಕದ್ದು.
4. ಸದರಿ ಸೀಟುಗಳನ್ನು ಕರ್ನಾಟಕ ರಾಜ್ಯದ ವಿದ್ಯಾರ್ಥಿಗಳಿಗೆ ಮಾತ್ರ ಮೀಸಲಿಡತಕ್ಕದ್ದು.
5. ಹೈದ್ರಾಬಾದ್ ಕರ್ನಾಟಕದ ಮೀಸಲಾತಿ ಸೀಟುಗಳನ್ನು ನಿಯಮಾನುಸಾರ ಭರ್ತಿ ಮಾಡತಕ್ಕದ್ದು.
6. ಆಡಳಿತ ಮಂಡಳಿಗಳು ತಪ್ಪು ಮಾಹಿತಿ ನೀಡಿದ್ದಲ್ಲಿ ಅಥವಾ ಹೆಚ್ಚುವರಿಯಾಗಿ ಭರ್ತಿ ಮಾಡಿಕೊಂಡಲ್ಲಿ ಅಥವಾ ಯಾವುದೇ ನಿಯಮಗಳನ್ನು ಉಲ್ಲಂಘಿಸಿದ್ದಲ್ಲಿ ಕರ್ನಾಟಕ ವಿಶ್ವವಿದ್ಯಾಲಯ ಕಾಯ್ದೆ 2000ರನ್ವಯ ಕ್ರಮವಹಿಸತಕ್ಕದ್ದು.

ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು
ADIKAVI SRI MAHARSHI VALMIKI UNIVERSITY, RAICHUR
Krishna Tunga Campus, Mantralay Road (N.H. 167), Yergera -584133, Raichur, Karnataka
ಶೈಕ್ಷಣಿಕ ವಿಭಾಗ Website: https://raichuruniversity.ac.in

## I- Conversion Fee for First Year B.Ed. Course for the Academic Year 2024-25

| Sl. No | Fee structure/events | Fees to be paid by the student within State |
|---|---|---|
| 1 | Fee for converting Govt. to Management seat | 3000 |

25/3/25

ಡಾ.ಶಂಕರ. ವ್ಹಿ.
ಕೆ.ಎ.ಎಸ್ (ಆಯ್ಕೆ ಶ್ರೇಣಿ)
ಕುಲಸಚಿವರು
ಆದಿಕವಿ ಶ್ರೀ ಮಹರ್ಷಿವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು.

ಕುಲಸಚಿವರು
ರಾಯಚೂರು ವಿಶ್ವವಿದ್ಯಾಲಯ
ರಾಯಚೂರು

ಇವರಿಗೆ,
ಎಲ್ಲಾ ಸಂಯೋಜಿತ ಶಿಕ್ಷಣ ಮಹಾವಿದ್ಯಾಲಯಗಳ ಪ್ರಾಂಶುಪಾಲರುಗಳ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ, ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ,ರಾಯಚೂರು.

**ಪ್ರತಿ:**
1. ಕುಲಸಚಿವರು (ಮೌಲ್ಯಮಾಪನ) ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ,ರಾಯಚೂರು.
2. ಹಣಕಾಸು ಅಧಿಕಾರಿಗಳು, ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ,ರಾಯಚೂರು..
3. ಉಪ ಕುಲಸಚಿವರು, ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ,ರಾಯಚೂರು..
4. ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ, ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ,ರಾಯಚೂರು..
5. ಕುಲಪತಿಗಳ ಆಪ್ತ ಕಾರ್ಯದರ್ಶಿ/ಕುಲಸಚಿವರ ಆಪ್ತ ಸಹಾಯಕ, ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ,ರಾಯಚೂರು.
6. ಜಾಲತಾಣ ವಿಭಾಗ, ಸದರಿ ಸುತ್ತೋಲೆಯನ್ನು ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಅಳವಡಿಸಲು.
7. ಕಚೇರಿ ಪ್ರತಿ.